**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.**

**ಓ.ಎಸ್.64 /2013**

ಸಾಕ್ಷಿಯನ್ನು ದಿಃ **16.08.2025** ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ 1ನೇ ಪ್ರತಿವಾದಿ ಪರ ಶ್ರೀ.ಎಸ್.ಎಸ್ ವಕೀಲರಿಂದ**

ನಾನು ವಾದ ಪತ್ರದಲ್ಲಿ ಕಾಣಿಸಿದ ವಿಳಾಸವಾದ ನಂ. 623, ನಿವೇದಿತ ಶಾಲೆಯ ಹತ್ತಿರ, ವಸಂತನಗರ ಮುಖ್ಯ ರಸ್ತೆ ಬೆಂಗಳೂರು 61 ರಲ್ಲಿ ವಾಸ ಇಲ್ಲ. ಅದು ನನ್ನ ತಮ್ಮನ ಮನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಮೇಲೆ ಹೇಳಿದ ವಿಳಾಸ ನನ್ನ ತಮ್ಮನ ಮನೆಯದ್ದು ಎಂದು ನಾನು ಹೇಳಿಲ್ಲ. ಅದನ್ನು ಹೇಳಲು ನನಗೆ ತೊಂದರೆ ಇರಲಿಲ್ಲ ಎಂದರೆ ದಾವೆ ಹಾಕುವ ಕಾಲಕ್ಕೆ ಒಂದು ವಿಳಾಸ ಬೇಕಾಗಿತ್ತು ಅದಕ್ಕಾಗಿ ಆ ವಿಳಾಸ ಕೊಟ್ಟಿದ್ದೇನೆ. ಸದರಿ ವಿಳಾಸ ನನ್ನ ಸ್ವಂತ ಮನೆಯದ್ದು ಆಗಿದ್ದರೂ ಕೂಡ ಅಲ್ಲ ಎಂದು ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 13ನೇ ಪ್ರತಿವಾದಿ ಈ ದಿನ ನನ್ನ ಜೊತೆ ನ್ಯಾಯಾಲಯಕ್ಕೆ ಬಂದಿಲ್ಲ. ವಾದಪತ್ರದಲ್ಲಿ ಕಾಣಿಸಿರುವ 13ನೇ ಪ್ರತಿವಾದಿ ಯ ವಿಳಾಸ ನಂ. 31/30 Bellur, Dr. Dariel I.L USA ಎಂಬುದು ನನ್ನ ಮಗಳ ಮನೆ. 13ನೇ ಪ್ರತಿವಾದಿಗೆ ಮದುವೆಯಾಗಿದೆ. ಮೇಲೆ ಹೇಳಿದ 13ನೇ ಪ್ರತಿವಾದಿಯ ವಿಳಾಸ ನನ್ನ ಸ್ವಂತ ಮನೆ ಎಂದರೆ ಸರಿಯಲ್ಲ. ಸದರಿ ಮನೆ 13ನೇ ಪ್ರತಿವಾದಿಯ ಅತೆ-ಮಾವನ ಮನೆಯಾಗಿದೆ. 13ನೇ ಪ್ರತಿವಾದಿಯ ಮದುವೆಯಾಗಿರುವುದರಿಂದ ವಾದ ಪತ್ರದಲ್ಲಿ ಅವರ ಗಂಡನ ವಿಳಾಸ ಇರಬೇಕಾಗಿತ್ತು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. 13ನೇ ಪ್ರತಿವಾದಿಂಯ ವಿಳಾಸ ನನ್ನ ಮಗಳ ಹೆಸರಿನಲ್ಲಿರುವ ನಮ್ಮ ಮನೆ ಎಂದರೆ ಸರಿಯಲ್ಲ. ನಂ. 54 ರಾಜ್ ಕುಮಾರ್ extension ವಾರ್ಡ್ ನಂ.29,30 ಮಂಡ್ಯ ಸಿಟಿ ಎಂಬುದು ಬಿಪಿ ಚಂದ್ರಶೇಖರ್ ರವರ ಸ್ವಂತ ಮನೆ ಎಂದರೆ ನನಗೆ ಗೊತ್ತಿರಲಿಲ್ಲ. ನನ್ನ ವಾದ ಪತ್ರದ 3ನೇ ಪ್ಯಾರಾದಲ್ಲಿ ನಾನು ಮತ್ತು ಪ್ರತಿವಾದಿಯರು ಒಂದೇ ಸೂರಿನಡಿಯಲ್ಲಿ ಒಟ್ಟು ಕುಟುಂಬದಲ್ಲಿ ವಾಸಮಾಡಿದ್ದೇನೆ ಎಂದು ಹೇಳಿದ್ದೇನೆ ಎಂದರೆ ಸರಿ. ನನ್ನ ಗಂಡ, ಅವರ ಸಹೋದರರು ಒಂದೇ ಸೂರಿನಡಿ ವಾಸ ಇದ್ದರು ಎಂದು ತೋರಿಸುವ ಬಗ್ಗೆ ದಾಖಲೆ

ಹಾಜರುಪಡಿಸಿದ್ದಿರಾ ಎಂದರೆ ಇಲ್ಲ. ನಾವು ಅಮೇರಿಕಾದಲ್ಲಿದ್ದೆವು. ಅಲ್ಲಿಂದ ಊರಿಗೆ ಬರುವಾಗ ಅದೇ ಮನೆಯಲ್ಲಿ ವಾಸವಿದ್ದೆವು. ಮದುವೆಯಾದಾಗಿನಿಂದ ನನ್ನ ಗಂಡ ಬದುಕಿರುವವರೆಗೂ ನಾವು ಅಮೇರಿಕಾದಿಂದ ಬರುವಾಗ ಅದೇ ಮನೆಯಲ್ಲಿ ವಾಸವಿದ್ದೆವು. ಆ ಬಗ್ಗೆ ದಾಖಲೆ ಇದೆಯೇ ಎಂದರೆ ಇಲ್ಲ. 1ನೇ ಪ್ರತಿವಾದಿಯ ಜೊತೆಯಲ್ಲಿ ಅವರ ಸಹೋದರರಾಗಿಲೀ ನಾನಾಗಲೀ ಯಾವತ್ತೂ ವಾಸ ಇರಲಿಲ್ಲ ಎಂದರೆ ಸರಿಯಲ್ಲ. 4ನೇ ಪ್ರತಿವಾದಿಗೆ ಮೈಸೂರಿನ ಯಾದವಗಿರಿಯಲ್ಲಿರುವ ಬ್ರಿಗೇಡ್ ಅಪಾರ್ಟ್ಮೆಂಟ್ ನಲ್ಲಿ ಒಂದು ಮನೆ ಇದೆ ಎಂದರೆ ಗೊತ್ತಿಲ್ಲ. ನಾವು ಅಮೇರಿಕಾದಲ್ಲಿದ್ದಾಗ 4ನೇಪ್ರತಿವಾದಿಯ ಮನೆಗೆ ಹೋಗಿ-ಬರುತ್ತಿದ್ದೆವು. 4ನೇ ಪ್ರತಿವಾದಿ ಅಮೇರಿಕಾದಲ್ಲಿ ಯಾವ ಮನೆಯಲ್ಲಿ ವಾಸವಿದ್ದರು ಎಂಬ ವಿಳಾಸ ನನಗೆ ಗೊತ್ತು ಎಂದರೆ ಸರಿ. 4ನೇ ಪ್ರತಿವಾದಿಯ ಅಮೇರಿಕಾದ ಮನೆಯನ್ನು ಈ ದಾವೆಯಲ್ಲಿ ಸೇರಿಸಬಹುದಾಗಿತ್ತು ಎಂದರೆ ನಾವು ಏನು ಖರ್ಚು ಮಾಡಿದ್ದೇವೆಯೋ ಅದನ್ನು ಸೇರಿಸಿದ್ದೇವೆ. ಆ ಮನೆಯನ್ನು ಸಹ ಈ ದಾವೆಯಲ್ಲಿ ಸೇರಿಸಬೇಕಾಗಿತ್ತು ಎಂದರೆ ನಾನು ಸೇರಿಸಿಲ್ಲ.

7ನೇ ಪ್ರತಿವಾದಿ 1ನೇ ಪ್ರತಿವಾದಿಯ ಪತ್ನಿ ಎಂದರೆ ಸರಿ. 7ನೇ ಪ್ರತಿವಾದಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಮೇಗರವಳ್ಳಿಯವರು ಎಂದರೆ ಸರಿ. ಮದುವೆಯಾದ ಸಮಯದಲ್ಲಿ 7ನೇ ಪ್ರತಿವಾದಿಯ ತವರು ಮನೆಗೆ ಹೋಗಿದ್ದಿರಾ ಎಂದರೆ ಒಂದು ಬಾರಿ ಹೋದ ಬಗ್ಗೆ ನೆನಪಿದೆ. 7ನೇ ಪ್ರತಿವಾದಿಯ ತವರು ಮನೆಯವರು ಆಗರ್ಭ ಶ್ರೀಮಂತರು ಎಂದರೆ ಸರಿಯಲ್ಲ. 7ನೇ ಪ್ರತಿವಾದಿಯ ತಂದೆಯ ಹೆಸರು ಅಣ್ಣಯ್ಯ ಹೆಗಡೆ ಎಂದರೆ ಸರಿ. ದಾವಾ ಐಟಂ ನಂ.3ನ್ನು 7ನೇ ಪ್ರತಿವಾದಿಯ ತಂದೆ ಅಣ್ಣಯ್ಯ ಹೆಗಡೆಯವರು 7ನೇ ಪ್ರತಿವಾದಿಗೆ ಕೊಡಿಸಿದ್ದಾರೆ ಎಂದರೆ ಸರಿಯಲ್ಲ. ನಾವು ಖರ್ಚು ಮಾಡಿದ್ದೇವೆ. 7ನೇ ಪ್ರತಿವಾದಿಯ ತವರು ಮನೆಯರು ಅನುಕೂಲಸ್ಥರಾಗಿದ್ದ ಕಾರಣ ದಾವಾ ಐಟಂ ನಂ.3 ನ್ನು ಅವರಿಗೆ ಕೊಡಿಸಿದ್ದರು ಎಂದರೆ ಸರಿಯಲ್ಲ. ನಿಪಿ-12 ರಿಂದ 20 ರಲ್ಲಿರುವ ಆಸ್ತಿಗಳು 1ನೇ ಪ್ರತಿವಾದಿಯ ಹೆಸರಿನಲ್ಲಿವೆ ಎಂದರೆ ನಾವು ಕಳುಹಿಸಿದ ಹಣದಿಂದ ನಮಗೆ ಗೊತ್ತಿಲ್ಲದಂತೆ ಮಾಡಿಕೊಂಡಿದ್ದಾರೆ. ನೀವು ಕಳಿಸಿದ ಹಣದಿಂದ ಗಳಿಸಿದ್ದಲ್ಲಿ ನಿಮ್ಮ ಹೆಸರನ್ನು ಸೇರಿಸುವಂತೆ ಒತ್ತಾಯಿಸಬಹುದಿತ್ತಲ್ಲವೇ ಎಂದರೆ

ಮಾಡಿಕೊಡುವುದಾಗಿ ಭರವಸೆಯನ್ನು ಕೊಡುತ್ತಾ ಬಂದಿದ್ದರು. ಬರವಣಿಗೆಯಲ್ಲಿ ನಮ್ಮ ಹೆಸರಿಗೆ ಮಾಡಿಕೊಡಿ ಎಂದು ಕೇಳಬಹುದಾಗಿತ್ತಲ್ಲವೇ ಎಂದರೆ ನ್ಯಾಯಾಲಯಕ್ಕೆ ಬಂದ ನಂತರ ಆ ರೀತಿ ಮಾಡಬಹುದಿತ್ತು ಎಂದು ತಿಳಿಯಿತು. ನಾವು 1ನೇ ಪ್ರತಿವಾದಿಗೆ ಯಾವುದೇ ಹಣವನ್ನು ಅಮೇರಿಕಾದಿಂದ ಕಳುಹಿಸಿಲ್ಲ ಮತ್ತು ಅವರು ನಮ್ಮ ಹಣದಿಂದ ಆಸ್ತಿ ಖರೀದಿಸಿಲ್ಲ ಎಂದರೆ ಸರಿಯಲ್ಲ. ನಿಪಿ–12 ರಿಂದ 20 ರಲ್ಲಿರುವ ವ್ಯವಹಾರಗಳು ದಿಃ 03.12.2007 ಕ್ಕಿಂತಲೂ ಮೊದಲಿನ ವ್ಯವಹಾರಗಳು ಎಂದರೆ ಸರಿ. ದಾವಾ ಸ್ವತ್ತುಗಳಲ್ಲಿ ನನಗಾಗಲೀ 13ನೇ ಪ್ರತಿವಾದಿಗಾಗಲೀ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ನಮ್ಮ ಹಣದಿಂದ ಗಳಿಸಲಾಗಿದೆ. 1 ಮತ್ತು 7ನೇ ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ಮಾಹಿತಿಯ ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ನಾನು ಸಲ್ಲಿಸಿದ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ಆದ್ದರಿಂದ ದಾವೆಯಲ್ಲಿ ಕೇಳಿದ ಪರಿಹಾರವನ್ನು ಪಡೆಯಲು ನಾನು ಅರ್ಹಳಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 3(ಎ) ಪರ ಶ್ರೀ.THG ವಕೀಲರಿಂದ

ಮೇಲಿನ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ನುಡಿಯುತ್ತಾರೆ.

ಪಾಟೀ ಸವಾಲುಃ 5 ಮತ್ತು 6ನೇ ಪ್ರತಿವಾದಿ ಪರ ಶ್ರೀ GCS ವಕೀಲರಿಂದಃ–

ಮೇಲಿನ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ನುಡಿಯುತ್ತಾರೆ.

ಪಾಟೀ ಸವಾಲುಃ 7ನೇ ಪ್ರತಿವಾದಿ ಪರ ಶ್ರೀ AKN ವಕೀಲರಿಂದಃ–

ಕಾಲಾವಕಾಶ ಕೋರಿದ್ದು, ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು